ಮಿಸಲೇನಿಯಸ್ ನಂಬರಃ 1/2017

ಪಿಡಬ್ಲ್ಯುಃ 1

ದಿನಾಂಕ 20-02-2020
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಎದುರುದಾರ ನಂಬರ 1(ಎ) ಪರ ವಕೀಲರಿಂದ**

ತೇಗೂರು ಗ್ರಾಮದಲ್ಲಿ ಗ್ರಾಮ ಪಂಚಾಯತಿ ಇರುತ್ತದೆ. ಸದರಿ ಗ್ರಾಮ ಪಂಚಾಯತಿ ಕಚೇರಿಯಲ್ಲಿ ಕಾರ್ಯದರ್ಶಿಗಳು ಇರುತ್ತಾರೆ ಎಂದರೆ ನಿಜ. ಗ್ರಾಮ ಪಂಚಾಯತಿಯಲ್ಲಿ ಆ ಗ್ರಾಮಕ್ಕೆ ಸಂಬಂದಪಟ್ಟ ಎಲ್ಲಾ ದಾಖಲೆಗಳು ಇರುತ್ತದೆ ಎಂದರೆ ನಿಜ. ಸದರಿ ಗ್ರಾಮ ಪಂಚಾಯತಿಯಲ್ಲಿ ಶಂಕರಗೌಡ ಪಾಟೀಲ ಇವರು ತೀರಿ ಹೋದ ಕುರಿತು ಹಾಗು ಅವರ ವಾರಸುದಾರರ ಕುರಿತು ವಿಚಾರಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಗ್ರಾಮ ಪಂಚಾಯತಿಗೆ ಹೋಗಲಿಲ್ಲ ಎಂದು ಹೇಳುತ್ತಾರೆ, ಸಾಕ್ಷಿದಾರರು ಮುಂದುವರಿದು ಸದರಿ ಊರಲ್ಲಿ ವಿಚಾರಿಸಿದ್ದೇನೆ, ಆದರೆ ಅವರ ಹೆಸರುಗಳು ನನಗೆ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ.

ನಾನು ಕಲಘಟಗಿ ತಾಲೂಕಿನ ಹುಲಕೊಪ್ಪ ಗ್ರಾಮದಲ್ಲಿ ಇರುತ್ತೇನೆ. ಆದ್ದರಿಂದ ತೇಗೂರು ಗ್ರಾಮದಲ್ಲಿ ಶಂಕರಗೌಡ ಪಾಟೀಲ ಇವರ ಕುರಿತು ವಿಚಾರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕಷ್ಟು ಕಾಲಾವಕಾಶ ಕೊಟ್ಟರು ಸಹ ಉದ್ದೇಶಪೂರ್ಕವಾಗಿ ನಾನು ನ್ಯಾಯಾಲಯಕ್ಕೆ ಹಾಜರು ಇರಲಿಲ್ಲ ಎಂದರೆ ಸಾಕ್ಷಿದಾರರು ನನಗೆ ಆರಾಮ ಇಲ್ಲದ ಕಾರಣ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ ಎಂದು ಹೇಳುತ್ತಾರೆ. ನನಗೆ ಆರಾಮ ಇಲ್ಲದ ಕುರಿತು ಇರುವ ದಾಖಲೆಗಳು ಮನೆಯಲ್ಲಿ ಇವೆ, ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನನಗೆ ಆರಾಮ ಇಲ್ಲ ಮತ್ತು ದಾಖಲಾತಿಗಳು ಇವೆ ಎಂದು ಸದರಿ ಅರ್ಜಿಗೆ ಅನೂಕೂಲವಾಗಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ಯಾವುದೇ ಸಕರಾಣ ಇಲ್ಲದೇ ನಾನು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಶ್ರೀ ಎಸ್ ವಿ ಪಿ ಎದುರುಗಾರ ಪರ 3 ರಿಂದ 4 ನೇ ಪರ ವಕೀಲರಿಂದ

ಪ್ರತಿವಾದಿ ನಂಬರ 3 ರಿಂದ 5 ಇವರು ತೇಗೂರು ಗ್ರಾಮಕ್ಕೆ ಸಂಬಂದಪಟ್ಟವರು ಎಂದರೆ ನಿಜ. ಸದರಿಯವರು ನಿಂಗಪ್ಪ ಗುಡದರಿ ಇವರ ಮಕ್ಕಳು ಎಂದರೆ ನಿಜ. ಸದರಿ ಪ್ರತಿವಾದಿ ನಂಬರ 3 ರಿಂದ 5 ಇವರ ವಯಸ್ಸು 24 ರಿಂದ 25 ಇದ್ದರೂ ಸಹ ಅವರ ವಯಸ್ಸುಗಳು 40-45 ಎಂದು ಸುಳ್ಳು ಬರೆದಿದ್ದೇವೆ ಎಂದರೆ ಸರಿಯಲ್ಲ. ಸದರಿಯವರು ಉದ್ಯೋಗ ಒಕ್ಕಲುತನ ಎಂದರೆ ನಿಜ. ತೇಗೂರು ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿ ಇರುತ್ತಾರೆ ಎಂದರೆ ನಿಜ. ಶಂಕರಗೌಡ ಪಾಟೀಲ ಇವರು ತೀರಿ ಹೋದ ಕುರಿತು ನಾನು ಸದರಿ ಗ್ರಾಮ ಲೆಕ್ಕಾಧಿಕಾರಿಯವರಿಗೆ ವಿಚಾರಿಸಿಲ್ಲ ಆದರೆ ಗ್ರಾಮದ ಜನರನ್ನು ಕೇಳಿರುತ್ತೇನೆ. ನಾನು ಸದರಿ ತೀರಿ ಹೋದ ಕುರಿತು ಪ್ರತಿವಾದಿ ನಂಬರ 3 ರಿಂದ 5 ಇವರನ್ನು ಸಹ ವಿಚಾರಿಸಿಲ್ಲ. ಸದರಿಯವರು ತೀರಿ ಹೋದ ಕುರಿತು ನನಗೆ ಗೊತ್ತಿದ್ದರೂ ಸಹ ವಿನಾ ಕಾರಣ ವಿಳಂಬ ಮಾಡಿದ್ದಕ್ಕೆ ನನ್ನ ಅರ್ಜಿಯನ್ನು ತಿರಸ್ಕರಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು 2004 ರಲ್ಲಿ ಹೂಡಿದರೂ ಸಹ ಇಲ್ಲಿಯವರೆಗೂ ಯಾವುದೇ ಸಕಾರಣ ಇಲ್ಲದೆ ವಿಳಂಬ ಮಾಡುತ್ತಾ ಪ್ರತಿವಾದಿಯರಿಗೆ ಅಥವಾ ಎದುರುಗಾರರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿಯನ್ನು ಸಹ ಯಾವುದೇ ಸಕಾರಣ ಇಲ್ಲದ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಆರಾಮ ಇಲ್ಲದ ಕುರಿತು ಇರುವ ಪುರಾವೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನನ್ನ ನಿರ್ಲಕ್ಷ್ಯತನದಿಂದ ಸದರಿ ದಾವೆಯನ್ನು ಕಿತ್ತು ಹಾಕಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ,** **ನನ್ನ ಸಮಕ್ಷಮ**

ಪ್ರಧಾನ ದಿವಾಣಿ **ನ್ಯಾಯಾದೀಶರು ಮತ್ತು**
ಪ್ರಧಾನ ಪ್ರ.ದ.ನ್ಯಾ.ದಂ. ಧಾರವಾಡ.